ಐದು ನಿಮಿಷ ಕಂಪಿಸಿದವ 'ಏಏ... ನನ್ನ ನನ್ಹತ್ರ ಆಟಾ ಬ್ಯಾಡಾ... ನೀನು ಯಾರಂತ ಕಂಡ್ಹಿಡದೆ...' ಅಂದವ ಮತ್ತೆ ಕಂಪಿಸತೊಡಗಿದ. ಅಕ್ಕಿ ಹೂವು ಸೇರಿಸಿ ಗಂಗಿಗೆ ರಭಸದಿಂದ ಹೊಡೆಯುತ್ತಾ 'ಏ... ಕುಳ್‌ತಿಮ್ಮೀ ನೀನೀಗ ಹೋಗ್. ಇಲ್ಲಂದ್ರೆ ಜಟ್ಕನಿಗ್ ಬಲಿಯಾಗ್ತಿ... ಹೊರಗ್‌ಬಾ... ಹಾಂಗೆ... ಹಾಂಗೆ. ಕಾಡಿಗ್ ಓಡ್ಹೋಗ್... ಹಾಂಗೆ!... ಹಾಂಗೆ!' ಅಂದವನ ಕಂಪನ ಕ್ರಮೇಣ ಕಮ್ಮಿಯಾಗುತ್ತ ಬಂತು. ಕುಳ್‌ತಿಮ್ಮಿ ಗಂಗಿಯ ಗಂಡನ ತಂಗಿ. ಕುಳಿತವರಲ್ಲಿ ಬೆರಗಿನ ಪಿಸುದನಿಯ ಉದ್ಗಾರ ವ್ಯಾಪಿಸಿತು. ಮದುವೆಯ ವಯಸ್ಸಿನವಳು ಕೆರೆಗೆ ಮೀನ ಹಿಡಿಯಲು ಹೋಗಿ ಸತ್ತಿದ್ದಳು. ದೀರ್ಘಶ್ವಾಸ ಬಿಡುತ್ತಾ ಸುಧಾರಿಸಿಕೊಂಡ ದೊಡ್ಡೀರ್ಯ ಗಟಗಟನೆ ತಂಬಿಗೆ ನೀರು ಕುಡಿದವ ಅಲ್ಲಿದ್ದ ಬಾಳೆಹಣ್ಣು ಸುಲಿದು ತಿಂದ. ಆಮೇಲೆ 'ಹೆದರಾ ಕೆಲ್ಸಿಲ್ಲ. ಚೌಡವ್ವಗೊಂದು ಕೋಳಿ ಕೊಯ್ರಿ. ಕಾರ್ತೀಕದ್ದಿನ ಎಣ್ಣೆ ಹನಿಸ್ರಿ... ಕೇಳ್ತನವ ಗಂಗಿ?...' ಆಶ್ವಾಸನ ಹೇಳಿದ. ಅವನ ಹೆಂಡತಿ ಅಲ್ಲಿದ್ದ ಅಕ್ಕಿ ಕಾಯಿ ದುಡ್ಡನ್ನೆಲ್ಲ ಒಟ್ಟುಮಾಡತೊಡಗಿದಳು.

★★★

ಕುಕ್ಕುರುಗಾಲಲ್ಲಿ ಕುಳಿತು ಒಟ್ಟುಮಾಡುತ್ತಿದ್ದ ಹೆಂಡತಿಯನ್ನು ದಿಟ್ಟಿಸಿದ ದೊಡ್ಡೀರ್ಯನ ಎದೆಯಲ್ಲಿ ನೋವು ಮಿಳಿಯಿತು. ದೊಡ್‌ಎದೆ ಸುಗಣಿ ಅಂತಲೇ ಕರೆಸಿಕೊಳ್ಳೋಳ ಎದೆಗೆ ಒಂದು ಮಗೂನ ಕೊಡಲಿಕ್ಕಾಗಲಿಲ್ಲ ತನಗೆ ಅನ್ನುವ ಸಂಕಟ ಅಷ್ಟಿಷ್ಟು ಅವಮಾನವಾಗಿಯೂ ಅಷ್ಟಿಷ್ಟು ವಿಷಾದವಾಗಿಯೂ ಸುಡುತ್ತಿತ್ತು. ಮದುವೆಯಾದ ಎರಡುವರ್ಷ ತಾನು ಬೀಜದ ಹೋರಿಯಂತೆ ಇದ್ದ; ಅದನ್ನು ಸುಗಣಿಯೇ ಆರಾಧಿಸುವ ಕಣ್ಣಿನಲ್ಲಿ ಪ್ರತಿಸಾರಿ ಬಾಯಿಬಿಟ್ಟು ಹೇಳಿದ್ದಳು. ಬೆಳೆ ಸಮೃದ್ಧಿಯಾಗಿ ಬರುತ್ತದೆ ಅನ್ನುವ ಶಾಸ್ತ್ರ ಕೇಳಿದ್ದಕ್ಕೆ ರಾತ್ರಿ ಗದ್ದೆಯ ಮಾಳಕ್ಕೆ ಹೆಂಡತಿಯನ್ನೂ ಕರೆದೊಯ್ಯುವುದಿತ್ತು. ಸುತ್ತಮುತ್ತಲೆಲ್ಲೂ ಜನಸಂಚಾರವಿಲ್ಲದ ಕಾನುಮಧ್ಯದ ಆ ಏಕಾಂತ ಎಲ್ಲಿಲ್ಲದ ಉನ್ಮಾದವನ್ನು ಕೆರಳಿಸುತ್ತಿತ್ತು. ಅವತ್ತೂ ಹೋರಿಯಂತೆ ವಿಜೃಂಭಿಸಿ ಮಲಗಿದ್ದ. ಅತಿತೃಪ್ತಿಯ ಆಯಾಸಕ್ಕೆ ಪಕ್ಕದಲ್ಲಿ ಸುಗಣಿ ತಕ್ಷಣ ಗಾಢನಿದ್ದೆಗೆ ಬಿದ್ದಾಗಿತ್ತು. ತನಗೂ ನಿದ್ದೆ ಹತ್ತತೊಡಗಿತ್ತು. ಅದು ತನಗೆ ನಿದ್ದೆಯೋ ಅಥವಾ ಎಚ್ಚರದಲ್ಲಾಯಿತೋ ಇವತ್ತಿಗೂ ಸಂದೇಹವಿದೆ. ಗುಡ್ಡದ ಕಡೆಯಿಂದ ಯಾರೋ ಕಪ್ಪಗೆ ಸಾಲಾಗಿ ಬಂದಂತೆ. ಭತ್ತದ ಪೈರನ್ನೆಲ್ಲ ಪರೀಕ್ಷೆ ಮಾಡಿ, ಮಾಳದ ಸುತ್ತ ಪ್ರದಕ್ಷಿಣೆ ಬಂದು, ಪಕ್ಕದಲ್ಲಿ ನಿತ್ತು ಗದರಿಸುವಂತೆ... ಕಣ್ಣು ಅಗಲಿಸಿ ದಿಟ್ಟಿಸಿದಂತೆ. ಅವರೆಲ್ಲ ಸೇರಿ ಕಂಬ ಗಲಗಲ ಅಲುಗಾಡಿಸಿದಂತಾಗಿ ತಾನು ಹೊರಳಿ ಕೆಳಗೆ ಬಿದ್ದಿದ್ದ. ಕಂಬಕ್ಕೆ ಮೈ ತಿಕ್ಕಿಕೊಳ್ಳುತ್ತಿದ್ದ ಹೋರಿಜಿಂಕೆ ಚಿಮ್ಮಿ ಚಿಮ್ಮಿ ಗುಡ್ಡದಕಡೆ ಓಡಿ ಮರೆಯಾಗಿತ್ತು. ಹತ್ತಿರದಲ್ಲಿ ಸ್ಮಶಾನವಿರುವ ಅರಿವು ಹಾಗೆಲ್ಲ ಭ್ರಮೆಗೆ ಕಾರಣವಿದ್ದೀತು ಅಂತ ಎಷ್ಟೋ ಸಾರಿ ಇವತ್ತಿನವರೆಗೂ ಅಂದುಕೊಳ್ಳಲು ಪ್ರಯತ್ನಿಸಿದ್ದಾನೆ. ನಿಜಕ್ಕೂ ಅಲ್ಲಾಡಿಸಿದ್ದರೆ ಸುಗಣಿ ಬೀಳಬೇಕಾಗಿತ್ತು. ಅವಳಿಗೂ ಅಲ್ಲಾಡಿದ ಅನುಭವವಾದರೂ ಆಗಬೇಕಿತ್ತು. ಅನುಭವವಿರಲಿ, ತಾನು ಬಿದ್ದಿದ್ದು ಗೊತ್ತಾದ್ದೇ ಬೆಳಗ್ಗೆ. ಬಿದ್ದವನಿಗೆ ಗದ್ದೆಯ ಕಂಟ ಸೊಂಟಕ್ಕೆ ಬಡಿದಿತ್ತು. ಅದರ ಪರಿಣಾಮ ಮರುದಿನವೇ ಗೊತ್ತಾಗಿತ್ತು. ನಿತ್ತು, ಕೂತು, ಬೇಸಾಯದ ಕೆಲಸದಲ್ಲಿ ಅದಷ್ಟು ಗೊತ್ತಾಗುತ್ತಿರಲಿಲ್ಲ. ಆದರೆ ಬಗ್ಗಿ ನೆಟ್ಟಗಾಗುವಾಗ, ವಿಶೇಷ ಸೊಂಟದ ಚಲನೆಯಲ್ಲಿ ಒಮ್ಮೊಮ್ಮೆ ಕಳಕ್ ಅಂತ ಕರೆಂಟು ಹೊಡೆದಹಾಗೆ ಆಗುವ ಅನುಭವ, ಎಂಥಾ ಹುಮ್ಮಸದಲ್ಲಿದ್ದರೂ ಕ್ಷಣಕ್ಕೆ ತಲ್ಲಣಕ್ಕೀಡುಮಾಡಿ ಕೆಂಡಕ್ಕೆ ನೀರು ಸೋಕಿದಂತಾಗುತ್ತಿತ್ತು. ಮೊದಲು ಸುಗಣಿಯ ಮುಖದಲ್ಲಿದು ಪ್ರತಿಫಲಿಸಿತು; ನಂತರ ಬಾಯಿಬಿಟ್ಟೇ ಹೇಳಿದಳು.

ಕೇರೀಲಿ ಲೆಕ್ಕಕ್ಕಿಲ್ಲದ ತನ್ನನ್ನು ಯಮ್ಮೆಗುಡ್ಡದ ಅಡವೀಲಿ ಮಾಡಿದ ಚೂರು ಗದ್ದೆ ಒಂದಷ್ಟು ತೂಕದವನನ್ನಾಗಿ ಮಾಡಿತ್ತು. ಒಳಗೊಳಗೇ ಉರಿಯಿಟ್ಟುಕೊಂಡಿದ್ದ ಜನಕ್ಕೆ ಎರಡು ವರ್ಷವಾದರೂ ಒಂದು ಮಗುವಾಗದ್ದು ಅವಕಾಶ ಮಾಡಿಕೊಡತಿದೆಯೇನೋ ಅಂತ ಕಳವಳಪಡುತ್ತಿದ್ದ.